# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 836 |
| 2 | ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : 10.03.2026 |
| 4 | ಉತ್ತರಿಸುವ ಸಚಿವರು | : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ (PMKKKY) ಅಡಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನಗಳ (DMF) ಕಾರ್ಯನಿರ್ವಹಣೆ ಮತ್ತು ನಿಧಿ ಬಳಕೆಗೆ ಸಂಬಂಧಿಸಿದಂತೆ CAG 2025 ನೇ ಸಾಲಿನ 7ನೇ ವರದಿಯಲ್ಲಿ ಉಲ್ಲೇಖಿಸಲಾದ ಪ್ರಮುಖ ಲೋಪಗಳು ಯಾವುವು; ಈ ಲೋಪಗಳನ್ನು ಸರಿಪಡಿಸಲು ಸರ್ಕಾರದ ಕ್ರಮಗಳೇನು ; | ಮಹಾಲೇಖಪಾಲರು ಬೆಂಗಳೂರು, ಇವರು ಬಳ್ಳಾರಿ, ಚಿತ್ರದುರ್ಗ, ಗದಗ, ಬೆಂಗಳೂರು ನಗರ ಹಾಗೂ ವಿಜಯನಗರ ಜಿಲ್ಲೆಗಳ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT) ಗಳ 2016ರಿಂದ 2023ರ ಅವಧಿಯ ಕಾರ್ಯಕ್ಷಮತಾ ಲೆಕ್ಕಪರಿಶೋಧನೆಯನ್ನು ನಡೆಸಿ, ಸಲ್ಲಿಸಿದ ವರದಿಯಲ್ಲಿನ ಪ್ರಮುಖ ಆಕ್ಷೇಪಣೆಗಳು ಈ ಕೆಳಕಂಡಂತಿರುತ್ತದೆ.<br><br>• CAG ವರದಿ ಸಂ:7/2025ರಲ್ಲಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ (PMKKKY) ಅಡಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನಗಳ (DMF) ಕಾರ್ಯಚಟುವಟಿಕೆಗಳನ್ನು ಮಾರ್ಚ್ 2023ರವರೆಗೆ ಪರಿಶೀಲಿಸಲಾಗಿದ್ದು, ಸದರಿ ವರದಿಯಲ್ಲಿ DMF ನಿಧಿಗಳ ಬಳಕೆಯಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿ ಸಾಧಿಸದಿರುವ ಬಗ್ಗೆ ಉಲ್ಲೇಖಿಸಿ, 2023ನೇ ಇಸವಿಯ ಅಂತ್ಯಕ್ಕೆ ಲಭ್ಯವಿದ್ದ ಒಟ್ಟು ನಿಧಿಯಲ್ಲಿ ಶೇಕಡಾ 45.62 ಮಾತ್ರ ವೆಚ್ಚವಾಗಿರುವುದು ಉಲ್ಲೇಖಿಸಲಾಗಿರುತ್ತದೆ.<br>• ಕೆಲವು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟಗಳ ವತಿಯಿಂದ ಟೆಂಡರ್ ಪ್ರಕ್ರಿಯೆ ಅನುಸರಿಸದೆ ಕಾಮಗಾರಿಗಳನ್ನು ನೀಡಿರುವುದು.<br>• ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ ಮಾರ್ಗಸೂಚಿಗಳಲ್ಲಿ ನಿಗಧಿಪಡಿಸಿಲ್ಲದ ಯೋಜನೆಗಳಿಗೆ DMFT ನಿಧಿಯನ್ನು ವಿನಿಯೋಗಿಸಿರುವ ಪ್ರಕರಣಗಳನ್ನು ಗುರುತಿಸಲಾಗಿರುತ್ತದೆ.<br>• ನಿಗಧಿತ ಸಮಯದಲ್ಲಿ ಕಾಮಾಗಾರಿಗಳನ್ನು ಪೂರ್ಣಗೊಳಿಸದಿರುವ ಬಗ್ಗೆ.<br>• ಕಾಮಗಾರಿ ಅನುಷ್ಠಾನ ಇಲಾಖೆಗಳಿಗೆ ಕಾಮಗಾರಿ ನಿರ್ವಹಿಸಲು ಬಿಡುಗಡೆ ಮಾಡಿರುವ ಮೊತ್ತದಲ್ಲಿ ಸಂಗ್ರಹವಾಗಿರುವ ಬಡ್ಡಿ ಹಣವನ್ನು ಸಂಬಂದಿಸಿದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟಗಳಿಗೆ ಹಿಂಪಡೆಯದೆ ಇರುವ ಬಗ್ಗೆ. |

| | | |
|---|---|---|
| | | • ಕಾಮಗಾರಿ ಅನುಷ್ಠಾನ ಇಲಾಖೆಗಳಿಂದ ಪಾವತಿಸುವ ನಿಗದಿತ ರಾಜಧನಕ್ಕೆ ಅನುಗುಣವಾಗಿ DMFT ವಂತಿಕೆಯನ್ನು ಸಂಗ್ರಹಣೆ ಮಾಡದಿರುವ ಬಗ್ಗೆ.<br>• ಅನಧಿಕೃತ ಖನಿಜ ಸಾಗಾಣಿಕೆ ಪ್ರಕರಣಗಳಲ್ಲಿ ದಂಡದ ಮೊತ್ತದ ಜೊತೆಗೆ DMFT ಮೊತ್ತವನ್ನು ಸಂಗ್ರಹಿಸದಿರುವ ಬಗ್ಗೆ.<br>DMFT ರಡಿ ಕೈಗೊಂಡ ಯೋಜನೆಗಳು ಉದ್ದೇಶಿತ ಕಾರ್ಯಕ್ರಮಕ್ಕೆ ಉಪಯೋಗಿವಾಗುತ್ತಿರುವ ಬಗ್ಗೆ ಮತ್ತು ಸದರಿ ಯೋಜನೆಗಳನ್ನು ವ್ಯವಸ್ಥಿತವಾಗಿ ನಿರ್ವಹಣೆಯನ್ನು ಸಂಬಂದಿಸಿದ ಫಲಾನುಭವಿ ಇಲಾಖೆಯಿಂದ ಕೈಗೊಂಡಿರುವ ಬಗ್ಗೆ ಪರಿಶೀಲಿಸುವ ಬಗ್ಗೆ ಸದರಿ ವರದಿಯಲ್ಲಿ ಉಲ್ಲೇಖಿಸಲಾಗಿರುತ್ತದೆ.<br>ರಾಜ್ಯ ಸರ್ಕಾರವು ವರದಿಯಲ್ಲಿ ಉಲ್ಲೇಖಿಸಲಾದ ಅಂಶಗಳಿಗೆ ಅನುಪಾಲನೆ ಸಲ್ಲಿಸಲು ಮತ್ತು ಸದರಿ ಪ್ರಕರಣಗಳು ಪುನರಾವರ್ತನೆಯಾಗದಂತೆ ಕ್ರಮವಹಿಸಲು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿರುತ್ತದೆ. |
| (ಆ) | ವಿವಿಧ ಜಿಲ್ಲೆಗಳಲ್ಲಿ 2018-23 ರ ಅವಧಿಯಲ್ಲಿ ಸಂಗ್ರಹವಾದ DMF ನಿಧಿಯ ಮೊತ್ತವೆಷ್ಟು ಬಳಕೆಯಾಗದ ಮೊತ್ತವೆಷ್ಟು ವೈಯಕ್ತಿಕ ಖಾತೆಗಳಲ್ಲಿ ಠೇವಣಿ ಇಟ್ಟು ನಷ್ಟ ಉಂಟಾಗಿರುವ ಬಗ್ಗೆ ಸರ್ಕಾರದ ಕ್ರಮಗಳೇನು; ಜಿಲ್ಲಾ ಖನಿಜ ಪ್ರತಿಷ್ಠನಗಳ ನಿಧಿ ಬಳಕೆಯ ಆದ್ಯತಾ ನಿಯಮಗಳೇನು; ಜಿಲ್ಲಾ ಖನಿಜ ಪ್ರತಿಷ್ಠಾನಗಳಿರುವ ಜಿಲ್ಲೆಗಳಲ್ಲಿ ಈ ಮೊತ್ತವನ್ನು ಯಾವ ಮಾರ್ಗಸೂಚಿಗಳಂತೆ ಯಾವ ಉದ್ದೇಶಗಳಿಗೆ ವೆಚ್ಚ ಮಾಡಲಾಗಿದೆ; | 2018-23ರ ಅವಧಿಯಲ್ಲಿ ಜಿಲ್ಲಾವಾರು ಸಂಗ್ರಹವಾದ ಹಾಗೂ ಬಳಕೆಯಾಗದ DMF ನಿಧಿಯ ಮೊತ್ತವನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.<br><br>ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಸಂಗ್ರಹವಾಗುವ DMFT ನಿಧಿಯನ್ನು ಆಯಾ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಬ್ಯಾಂಕ್ ಖಾತೆಯಲ್ಲಿಯೆ ಜಮಾ ಮಾಡಲಾಗುತ್ತಿದೆ. ಬಳಕೆಯಾಗದ ಮೊತ್ತವನ್ನು ಯಾವುದೇ ವೈಯಕ್ತಿಕ ಖಾತೆಗಳಲ್ಲಿ ಠೇವಣಿ ಇಟ್ಟಿರುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ.<br><br>ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಸಂಗ್ರಹವಾಗುವ ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮ-2016 ರ ನಿಯಮ 18ರಂತೆ, DMFT ರಡಿ ಸಂಗ್ರಹವಾದ ಒಟ್ಟು ನಿಧಿಯಲ್ಲಿ ಶೇಕಡ 10 ರಷ್ಟು ಮೊತ್ತವನ್ನು ದತ್ತಿನಿಧಿಗೆ (Endowment ಉದ್ದೇಶಗಳಿಗಾಗಿ), ಶೇಕಡ 5 ರಷ್ಟು ಮೊತ್ತವನ್ನು ಆಡಳಿತ ವೆಚ್ಚಕ್ಕಾಗಿ ಮೀಸಲಿರಿಸಿದ ನಂತರ ಉಳಿದ 85% ನಿಧಿಯನ್ನು ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿಗಾಗಿ ವಿನಿಯೋಗಿಸಬೇಕಾಗಿರುತ್ತದೆ.<br><br>ಮೇಲ್ಕಂಡಂತೆ ಹಂಚಿಕೆಯಾದ ಮೊತ್ತದಲ್ಲಿ ಗಣಿಬಾಧಿತ ಪ್ರದೇಶದಲ್ಲಿನ ಹೆಚ್ಚಿನ ಆಧ್ಯತಾ ವಲಯಗಳಿಗೆ ಕನಿಷ್ಠ 60% ಮತ್ತು ಇತರೆ ಆದ್ಯತೆಯ ವಲಯಗಳಿಗೆ ಗರಿಷ್ಠ 40% ಮೀರದಂತೆ ನಿಧಿಯನ್ನು ವಿನಿಯೋಗಿಸಬೇಕಿರುತ್ತದೆ. ವಲಯಗಳ ವಿವರಗಳು ಈ ಕೆಳಗಿನಂತಿದೆ; |

| | | |
|---|---|---|
| | | **ಹೆಚ್ಚಿನ ಆದ್ಯತಾ ವಲಯಗಳು (60%)**<br><br>1) ಕುಡಿಯುವ ನೀರು ಸರಬರಾಜು, 2) ಪರಿಸರ ಸಂರಕ್ಷಣೆ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಕ್ರಮ, 3) ಆರೋಗ್ಯ ರಕ್ಷಣೆ, 4) ಶಿಕ್ಷಣ, 5) ಮಹಿಳಾ ಮತ್ತು ಮಕ್ಕಳ ಕಲ್ಯಾಣ, 6) ವೃದ್ಧರು ಮತ್ತು ವಿಶೇಷಚೇತನರ ಕಲ್ಯಾಣ, 7) ಕೌಶಲ್ಯಾಭಿವೃದ್ಧಿ, 8) ನೈರ್ಮಲ್ಯ<br><br>**ಇತರೆ ಆದ್ಯತಾ ವಲಯಗಳ (40%)**<br><br>1) ಮೂಲಭೂತ ಸೌಕರ್ಯ, 2) ನೀರಾವರಿ, 3) ಇಂಧನ (ಶಕ್ತಿ) ಮತ್ತು ಜಲಾನಯನ ಅಭಿವೃದ್ಧಿ, 4) ಗಣಿ ಪರಿಸರದಲ್ಲಿನ ಪರಿಸರ ಸಂರಕ್ಷಣೆಗಾಗಿ/ ಸಂವರ್ಧನೆಗಾಗಿ ಇತರ ಯೋಜನೆ ವಲಯಗಳ ಕಾರ್ಯಗಳಿಗೆ ವಿನಿಯೋಗಿಸಬಹುದಾಗಿರುತ್ತದೆ.<br><br>ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT) ನಿಯಮಗಳು, 2016ರನ್ವಯ ಜಿಲ್ಲಾ ಮಟ್ಟದಲ್ಲಿರುವ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಆಡಳಿತ ಮಂಡಳಿ( ಗೌರ್ನಿಂಗ್ ಕೌನ್ಸಿಲ್) ಯಲ್ಲಿ ಆಯಾ ಜಿಲ್ಲೆಯ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುತ್ತಾರೆ ಹಾಗೂ ಆಯಾ ಜಿಲ್ಲಾ ವ್ಯಾಪ್ತಿಯಲ್ಲಿನ ಶಾಸಕರು, ಸಂಸದರು, ವಿಧಾನಪರಿಷತ್ತು ಸದಸ್ಯರು , ರಾಜ್ಯ ಸಭಾ ಸದಸ್ಯರು ಗಳು ಸಹ ಸದಸ್ಯರು/ಟ್ರಸ್ಟಿಗಳಾಗಿರುತ್ತಾರೆ. ಸದರಿ ಸದಸ್ಯರು/ಟ್ರಸ್ಟಿಗಳು ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸದಸ್ಯ ಅನುಷ್ಠಾನ ಇಲಾಖೆಗಳಿಂದ ಗಣಿಬಾದಿತರ ಪ್ರದೇಶಗಳ ಅಭಿವೃದ್ಧಿ ಮತ್ತು ಗಣಿಬಾಧಿತ ಪ್ರದೇಶಗಳಲ್ಲಿ ವಾಸಿಸುವ ಜನರ ಕಲ್ಯಾಣಕ್ಕೆ ಅಗತ್ಯವಾದ ಯೋಜನೆಗಳ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ, ಸದರಿ ಯೋಜನೆಗಳನ್ನು ಒಟ್ಟಾರೆಯಾಗಿ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದ ನಂತರ ಯೋಜನೆಗಳನ್ನು ಕಾರ್ಯನುಷ್ಠಾನಗೊಳಿಸಲಾಗುತ್ತಿದೆ. |
| ಇ | ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲಾ ಖನಿಜ ಪ್ರತಿಷ್ಠಾನಗಳಲ್ಲಿ ಸಂಗ್ರಹಿಸಿದ ಮೊತ್ತ ಹಾಗೂ ವೆಚ್ಚ ಮಾಡಿದ ಮೊತ್ತವೆಷ್ಟು; ಯಾವ ಅಧಿಕಾರ ಮತ್ತು ಮಾರ್ಗಸೂಚಿಗಳಡಿ ಈ ಮೊತ್ತವನ್ನು ಖರ್ಚುಮಾಡಲಾಗಿದೆ; | ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲಾ ಖನಿಜ ಪ್ರತಿಷ್ಠಾನಗಳಲ್ಲಿ ಸಂಗ್ರಹಿಸಿದ ಮತ್ತು ವೆಚ್ಚ ಮಾಡಿದ ಮೊತ್ತದ ವಿವರಗಳನ್ನು **ಅನುಬಂಧ- 2 ರಲ್ಲಿ** ಒದಗಿಸಿದೆ.<br><br>ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ ಸಂಗ್ರಹವಾಗುವ DMFT ನಿಧಿಯ ವೆಚ್ಚದ ಕುರಿತು ಮಾರ್ಗಸೂಚಿಗಳ ಕುರಿತು ಮೇಲಿನ ಉಪ ಪ್ರಶ್ನೆ (ಆ) ಗೆ ನೀಡಿದ ಉತ್ತರದಲ್ಲಿ ವಿವರಗಳನ್ನು ಒದಗಿಸಲಾಗಿದೆ. |

| | | |
|---|---|---|
| ಈ | ಗಣಿಗಾರಿಕೆ ಬಾಧಿತ ಪ್ರದೇಶಗಳಲ್ಲಿ ತ್ಯಾಜ್ಯ ಸಂಸ್ಕರಣೆ, ಅಂತರ್-ಜಲಮೂಲಗಳ ಸಂರಕ್ಷಣೆ ಶಾಲಾ ಸೌಕರ್ಯಗಳು, ಸೇತುವೆಗಳು, ರೈಲ್ವೆ ಜಲಮಾರ್ಗ ಮುಂತಾದ ಪರಿಸರ ಪುನಶ್ಚೇತನ ಕಾಮಗಾರಿಗಳ ಬದಲಿಗೆ ಉದ್ಯಾನವನ/ಸಭಾಂಗಣ, ಕಚೇರಿ ಕಟ್ಟಡ, ಕ್ರೀಡಾಂಗಣ, ಹಾಸ್ಟೆಲ್, ಹೈಮಾಸ್ಟ್, ಮಿನಿಸೌಧಕ್ಕೆ ಭೂಸ್ವಾಧೀನ ಇತ್ಯಾದಿಗಳಿಗೆ ನಿಧಿಯ ಹಣ ವಿನಿಯೋಗಿಸಿರುವುದರ ಬಗ್ಗೆ ಸರ್ಕಾರದ ನಿಲುವೇನು; | ದಿನಾಂಕ: 16.09.2015ರಂದು ಭಾರತ ಸರ್ಕಾರವು ಹೊರಡಿಸಿದ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ ಮಾರ್ಗಸೂಚಿಗಳಂತೆ ಸದರಿ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಸರ್ಕಾರದಿಂದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT) ನಿಯಮಗಳು, 2016ರನ್ನು ಜಾರಿಗೊಳಿಸಲಾಗಿರುತ್ತದೆ.<br>ಸದರಿ ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016ರನ್ವಯ, ಜಿಲ್ಲಾ ಮಟ್ಟದಲ್ಲಿ ಸಂಬಂದಿಸಿದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗಳಿಂದ ಕ್ರಿಯಾಯೋಜನೆಯನ್ನು ತಯಾರಿಸಿ, ಸದರಿ ಪ್ರಸ್ತಾವನೆಯನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗಳ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಸದರಿ ಸಭೆಗಳ ತೀರ್ಮಾನದಂತೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.<br>ಸಂಬಂದಿಸಿದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗಳಿಂದ ಸಭಾಂಗಣ, ಕಚೇರಿ ಕಟ್ಟಡ, ಮಿನಿಸೌಧಕ್ಕೆ ಭೂಸ್ವಾಧೀನ ಇತ್ಯಾದಿಗಳಿಗೆ ನಿಧಿಯ ಹಣ ವಿನಿಯೋಗಿಸಬಾರದಾಗಿ ದಿನಾಂಕ: 20.12.2025 ರಂದು ಸಂಬಂದಿಸಿದ ಎಲ್ಲಾ ಜಿಲ್ಲಾದಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ. |
| ಉ | ಮುಂದಿನ ದಿನಗಳಲ್ಲಿ ಗಣಿಗಾರಿಕೆ ಬಾಧಿತ ಪ್ರದೇಶಗಳಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಪರಿಸರ ಪುನಶ್ಚೇತನ ಉದ್ದೇಶಗಳಿಗೆ ಮಾತ್ರ ನಿಧಿ ಬಳಸಲು ಮತ್ತು ನಿಧಿ ಬಳಕೆಯ ಮಾರ್ಗಪಲ್ಲಟ ತಡೆಯಲು ಸರ್ಕಾರ ಯಾವ ಮಾರ್ಗಸೂಚಿಗಳನ್ನು ಜಾರಿಗೊಳಿಸಲಿದೆ; | ಗಣಿಗಾರಿಕೆ ಬಾಧಿತ ಪ್ರದೇಶಗಳಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಪರಿಸರ ಪುನಶ್ಚೇತನ ಉದ್ದೇಶಗಳಿಗೆ ಮಾತ್ರ ನಿಧಿ ಬಳಸಲು ಮತ್ತು ನಿಧಿ ಬಳಕೆಯ ಮಾರ್ಗಪಲ್ಲಟ ತಡೆಯಲು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ(PMKKKY) ಪರಿಷ್ಕೃತ ಮಾರ್ಗಸೂಚಿಗಳು 2024 ಅನ್ನು ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಯಮಗಳು 2016 ರನ್ವಯ ಅಗತ್ಯ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:** ಸಿಐ 37 ಎಂಎಂಎಂ 2026

**(ಎಸ್.ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು

ಅನುಬಂಧ - 1

**2017-18 ರಿಂದ 2023-24 ರ ಅವಧಿಯಲ್ಲಿ ಜಿಲ್ಲಾವಾರು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನ ಅಡಿಯಲ್ಲಿ ಸಂಗ್ರಹವಾದ ಹಾಗೂ ಬಳಕೆಯಾದ ಮೊತ್ತದ ವಿವರ**

ರೂ ಕೋಟಿಗಳಲ್ಲಿ

| Sl.No. | District | Total collected amount | Total sanctioned amount |
|---|---|---|---|
| 1 | Ballari | 2277.93 | 1532.15 |
| 2 | Vijayanagara | 456.56 | 741.84 |
| 3 | Kalaburagi | 489.86 | 404.10 |
| 4 | Chitradurga | 537.22 | 333.75 |
| 5 | Bagalkote | 99.94 | 146.22 |
| 6 | Raichur | 59.88 | 53.30 |
| 7 | Koppal | 63.91 | 91.62 |
| 8 | Chikkaballapura | 63.53 | 86.21 |
| 9 | Belagavi | 56.70 | 49.16 |
| 10 | Bengaluru Urban | 55.06 | 73.50 |
| 11 | Ramangara | 48.96 | 34.65 |
| 12 | Tumkur | 47.70 | 53.40 |
| 13 | Bengaluru Rural | 43.41 | 33.96 |
| 14 | Chamarajanagar | 32.82 | 22.32 |
| 15 | Hassan | 24.19 | 13.55 |
| 16 | Dakshina kannada | 19.07 | 3.43 |
| 17 | Kolar | 18.07 | 19.49 |
| 18 | Chikkamagaluru | 17.34 | 12.38 |
| 19 | Udupi | 15.72 | 8.98 |
| 20 | Uttara Kannada | 13.33 | 7.62 |
| 21 | Gadag | 12.16 | 6.57 |
| 22 | Davanagere | 8.07 | 8.27 |
| 23 | Dharwad | 10.01 | 7.16 |
| 24 | Mandya | 9.43 | 6.56 |
| 25 | Haveri | 8.75 | 4.59 |
| 26 | Vijayapura | 5.90 | 4.59 |
| 27 | Yadgiri | 1.53 | 0.50 |
| 28 | Shivamogga | 3.14 | 1.13 |
| 29 | Mysuru | 3.46 | 2.35 |
| 30 | Bidar | 2.49 | 0.48 |
| 31 | Kodagu | 1.85 | 0.73 |
| **Total** | | **4507.97** | **3764.54** |

H.C.K.

ನೋಡಲ್ ಅಧಿಕಾರಿಗಳು ಡಿ ಎಂ ಎಫ್

ಅನುಬಂಧ - 2

2015-16 ರಿಂದ 2025-26 ರ ( ಜನವರಿ 2026 ಅಂತ್ಯದವರೆಗೆ ) ದಕ್ಷಿಣ ಕನ್ನಡ,ಉಡುಪಿ ಮತ್ತು ಶಿವಮೊಗ್ಗ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನ ಅಡಿಯಲ್ಲಿ ಸಂಗ್ರಹವಾದ ಹಾಗೂ ವೆಚ್ಚ ಮಡಿದ ವಿವರ.

ರೂ ಕೋಟಿಗಳಲ್ಲಿ

| Sl. No. | District | DMF Collection from 2015-16 to 2024-25(up to January 2026) | Approved Action plan Amount | PMKKKY Amount Spent |
|---|---|---|---|---|
| 1 | Dakshina Kannada | 41.85 | 3.43 | 3.08 |
| 2 | Udupi | 24.85 | 9.03 | 8.20 |
| 3 | Shivamogga | 4.35 | 1.13 | 0.83 |
| **Grand Total** | | **71.04** | **13.58** | **12.11** |

H.C.K

ನೋಡಲ್ ಅಧಿಕಾರಿಗಳು ಡಿ ಎಂ ಎಫ್